# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : ( 559) 528
2. ಮಾನ್ಯ ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11.12.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಎಸ್.ಆರ್.ಪಿ.ಯ (Karnataka State Reserve Police)13 ನೇ ಪಡೆಯನ್ನು ರಾಯಚೂರಿನಲ್ಲಿ ಸ್ಥಾಪಿಸಲು ತಗಲುವ ಅನಾವರ್ತಕ ವೆಚ್ಚಕ್ಕೆ ಅನುದಾನವನ್ನು ಕೆ.ಕೆ.ಆರ್.ಡಿ.ಬಿ ಅಭಿವೃದ್ಧಿ ಮಂಡಳಿಯಿಂದ ಹಂತಹಂತವಾಗಿ ಭರಿಸಬಹುದೆಂದು ಸ್ವತಃ ಕಲ್ಯಾಣ ಕರ್ನಾಟಕ ಭಾಗದ ಜನ ಪ್ರತಿನಿಧಿಗಳು ತಿಳಿಸಿದ್ದರೂ ಆರ್ಥಿಕ ಇಲಾಖೆ ತಿರಸ್ಕೃತಗೊಳಿಸಲು ಕಾರಣವೇನು? | ಹೊಸ ಘಟಕಗಳ ಸ್ಥಾಪನೆ ಮತ್ತು ಹೊಸ ಹುದ್ದೆಗಳ ಸೃಜನೆಯನ್ನು ಅಗತ್ಯತೆ ಮತ್ತು ಹಣಕಾಸು ಲಭ್ಯತೆಯ ಆಧಾರದ ಮೇಲೆ ಪರಿಗಣಿಸಲಾಗುತ್ತದೆ.<br><br>ಈ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಕೆ.ಎಸ್.ಆರ್.ಪಿ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪ್ರಸಕ್ತ ಸಾಲಿಗೆ ಪರಿಗಣಿಸಲು ಅವಕಾಶವಾಗುವುದಿಲ್ಲ ವೆಂದು ತಿಳಿಸಲಾಗಿದೆ. |
| ಆ) | ಎರಡು ಐ.ಆರ್.ಬಿ (Indian Reserve Battalion) ಘಟಕಗಳನ್ನು ದಕ್ಷಿಣ ಕರ್ನಾಟಕ ಭಾಗದಲ್ಲಿ ಸ್ಥಾಪಿಸಿದ್ದರಿಂದ ರಾಯಚೂರು ಜಿಲ್ಲೆಯಲ್ಲಿ ಕೆ.ಎಸ್.ಆರ್.ಪಿ ಘಟಕವನ್ನು ಸ್ಥಾಪಿಸಲು ಸಾಧ್ಯವಿಲ್ಲ ಎಂಬ ಕಾರಣ ನೀಡಿ ಆರ್ಥಿಕ ಇಲಾಖೆ ತಿರಸ್ಕರಿಸಿದ್ದು, ಇದರಿಂದಾಗಿ ಕಲ್ಯಾಣ ಕರ್ನಾಟಕದ ಕಾನೂನು ಸುವ್ಯವಸ್ಥೆ ಮತ್ತು ಕೆ.ಎಸ್.ಆರ್.ಪಿ ಸಿಬ್ಬಂದಿಗಳಿಗೆ ಯಾವುದೇ ರೀತಿ ಅನುಕೂಲ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | |
| ಇ) | ಕೆ.ಎಸ್.ಆರ್.ಪಿ ಮತ್ತು ಐ.ಆರ್.ಬಿ ಘಟಕಗಳನ್ನು ಪ್ರತ್ಯೇಕಿಸಿ ವೃಂದ ಮತ್ತು ನೇಮಕಾತಿ ನಿಯಮ ರೂಪಿಸಿದ್ದರಿಂದ ಕಲ್ಯಾಣ ಕರ್ನಾಟಕದ ಎಷ್ಟು ಸಿಬ್ಬಂದಿಗಳಿಗೆ ಸ್ಥಳ ನಿಯುಕ್ತಿ ಹಾಗೂ ಪದನ್ನೋತಿಗೆ ತೊಂದರೆ ಆಗುತ್ತದೆ: ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? | ಹೊಸ ಪಡೆ /ಘಟಕಗಳ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಮೇಲೆ ತಿಳಿಸಿದಂತೆ ಅಂತಹ ನೌಕರರ ಅಗತ್ಯತೆ ಮತ್ತು ಹಣಕಾಸು ಸ್ಥಿತಿಗತಿ ಆಧರಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಇಂತಹ ಪ್ರಸ್ತಾವನೆಗಳನ್ನು ಸಿಬ್ಬಂದಿಗಳ ಸ್ಥಳ ನಿಯುಕ್ತಿ ಮತ್ತು ಪದೋನ್ನತಿ ದೃಷ್ಠಿಯಿಂದ ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಆಡಳಿತ ಇಲಾಖೆಯಿಂದ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕಾಗುತ್ತದೆ. |

**ಕಡತ ಸಂಖ್ಯೆ:ಎಫ್‌ಡಿ 611 ವೆಚ್ಚ-11/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ